# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 3089/10/31/2020 (SB –3)**

**ದಿನಾಂಕ: 24–11–2021.**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀಮತಿ ಸಯಿದಾ ನಸ್ರೀನ್
ಕೋಂ ಅಬ್ದುಲ್ ಜಬ್ಬರ್
ನಂ. 11, 2ನೇ ಮುಖ್ಯ ರಸ್ತೆ,
ಸಿ.ಕೆ.ಸಿ. ಗಾರ್ಡನ್,
ಬೆಂಗಳೂರು–560027.

## ಆದೇಶ

ಶ್ರೀಮತಿ ಸಯಿದಾ ನಸ್ರೀನ್ ಕೋಂ ಶ್ರೀ ಅಬ್ದುಲ್ ಜಬ್ಬರ್ ರವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿ, ತಾನು ತಿಲಕ್ ನಗರದ 31 ನೇ ಅಡ್ಡರಸ್ತೆ, ಮನೆ ನಂ.75 ರ ಮೂರನೇ ಮಹಡಿಯಲ್ಲಿರುವ ಮನೆಯನ್ನು ಶ್ರೀಮತಿ ಉಷಾ ಎಂಬುವವರಿಗೆ ಬಾಡಿಗೆಗೆ ನೀಡಿದ್ದು, ಅವರು 3–4 ವರ್ಷಗಳ ಕಾಲ ವಾಸವಾಗಿದ್ದು, ಸದರಿಯವರು ಮನೆಯನ್ನು ಖಾಲಿ ಮಾಡುವಾಗ ಅಡ್ವಾನ್ಸ್ ಆಗಿ ನೀಡಿದ್ದ ರೂ.80,000/– ರೂಪಾಯಿಗಳ ಪೈಕಿ ರೂ.50,000/– ರೂಪಾಯಿಗಳನ್ನು ಶ್ರೀಮತಿ ಸಯಿದಾ ನಸ್ರೀನ್ ರವರು ಹಿಂತಿರುಗಿಸಿದ್ದು, ಉಳಿದ ರೂ.30,000/– ರೂಪಾಯಿಗಳನ್ನು ಬಾಕಿ ಇರುವ ಬಾಡಿಗೆ ಹಣ ಹಾಗೂ ಮನೆಗೆ ಬಣ್ಣ ಹೊಡೆಯುವುದು ಸೇರಿದಂತೆ ಇತರೆ ಖರ್ಚುಗಳಿಗಾಗಿ ತನ್ನ ಬಳಿ ಇಟ್ಟುಕೊಂಡಿದ್ದರಿಂದ ಶ್ರೀಮತಿ ಉಷಾರವರು ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ದಾಖಲಿಸಿದ್ದು, ಸದರಿ ಠಾಣೆಯ ಮಹಿಳಾ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಸವಿನಯ ಜಯರಾಜ್ ರವರು ತನ್ನನ್ನು ಠಾಣೆಗೆ ಕರೆಸಿಕೊಂಡು ಅವಾಚ್ಯ ಶಬ್ಧಗಳಿಂದ ನಿಂದಿಸಿ, ಹಲ್ಲೆ ಮಾಡಿ ಮೊಬೈಲ್ ಫೋನ್ ತೆಗೆದುಕೊಂಡು ವಾಪಸ್ ನೀಡಬೇಕಾದರೆ ಹಣದ ಬೇಡಿಕೆ ಇಟ್ಟಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಸದರಿ ಠಾಣೆಯ ಪಿಎಸ್‌ಐ ಶ್ರೀಮತಿ

ಸವಿನಯ ಜಯರಾಜ್ ರವರ ವಿರುದ್ಧ ಕಾನೂನು ರೀತಿಯ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

ದೂರರ್ಜಿಯ ಬಗ್ಗೆ ವಿಚಾರಣೆ ನಡೆಸಿ ಆಯೋಗಕ್ಕೆ ವರದಿ ಸಲ್ಲಿಸುವಂತೆ ಉಪ ಪೊಲೀಸ್ ಆಯುಕ್ತರು, ಆಗ್ನೇಯ ವಿಭಾಗ, ಬೆಂಗಳೂರು ರವರಿಗೆ ಆದೇಶಿಸಲಾಗಿದ್ದು, ಅದರಂತೆ ಸದರಿಯವರು ಸಹಾಯಕ ಪೊಲೀಸ್ ಆಯುಕ್ತರು, ಮೈಕೋಲೇಔಟ್ ಉಪವಿಭಾಗ ರವರಿಂದ ವರದಿ ಪಡೆದುಕೊಂಡು ಆಯೋಗಕ್ಕೆ ವರದಿ ಸಲ್ಲಿಸಿದ್ದಾರೆ.

ಸದರಿ ದೂರರ್ಜಿಗೆ ಸಂಬಂಧಿಸಿದಂತೆ ಪೊಲೀಸ್ ಇನ್ಸ್‌ಪೆಕ್ಟರ್, ತಿಲಕನಗರ ಪೊಲೀಸ್ ಠಾಣೆಯವರು ವಿಚಾರಣೆ ಕೈಗೊಂಡಿದ್ದು, ದೂರರ್ಜಿಯ ಕುರಿತು ಅರ್ಜಿದಾರರು, ಎದುರುದಾರರು ಮತ್ತು ಸಾಕ್ಷಿದಾರರುಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಜಯನಗರ ಜನರಲ್ ಆಸ್ಪತ್ರೆಯ ಅರ್ಜಿದಾರರ ಗಾಯದ ಪ್ರಮಾಣ ಪತ್ರ ಪರಿಶೀಲಿಸಿದ್ದು, ಅರ್ಜಿದಾರರಿಗೆ ಆಗಿರುವ ಗಾಯ 2 ರಿಂದ 18 ಗಂಟೆಗಳ ಒಳಗೆ ಆಗಿರಬಹುದೆಂದು ಅಂದರೆ ದೂರುದಾರರಾದ ಸಯಿದಾ ನಸ್ರೀನ್ ರವರು ಠಾಣೆಗೆ ವಿಚಾರಣೆಗೆ ಹಾಜರಾಗುವ ಮುಂಚೆಯೇ ಆಗಿರುವ ಗಾಯಗಳಾಗಿರುತ್ತದೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಅರ್ಜಿದಾರರು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಅರ್ಜಿದಾರರ ವಿರುದ್ದ ಉಷಾ ಎಂಬುವವರು ಬಾಡಿಗೆಯ ಅಡ್ವಾನ್ಸ್ ವಿಚಾರವಾಗಿ ಎನ್‌ಸಿಆರ್‌ನಂ:73/2020 ದಾಖಲಿಸಿದ್ದು, ಅರ್ಜಿದಾರರು ವಿಚಾರಣೆಗೆ ಸಹಕರಿಸದೇ ಪೊಲೀಸ್ ಅಧಿಕಾರಿಯ ವಿರುದ್ದ ಸುಳ್ಳು ಆರೋಪ ಮಾಡಿರುತ್ತಾರೆಂದು ವರದಿ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ದೂರುದಾರರು ಈ ಕೆಳಕಂಡಂತೆ ಅಭಿಪ್ರಾಯ ಸಲ್ಲಿಸಿದ್ದಾರೆ:

> "1. The fact, the fact in issue are not correct to the incidence that took place on 13.09.2020 as the complainant usha does not know my residential address as the matter was settled long back and she is due for

payment, hence what I have to pay, what Usha shall give to me for monetary transaction, the competent Court is Civil Court, to decide the matter but not the police station, police station is not a Panchayat khatta to solve the Civil Dispute and the police has no right to decide such issues, in spite of this the entertainment of petitions which are Civil in Nature by S.I Savinaya Jairaj is bad in law and she exceeded her power in entertaining such petitions, if the S.I Lady had not entertained, such incident would not have happened.

A Lady S.I Savinaya Jairaj has taken law into her hand and committed crime which already explained in detail, this fact has been proved by MLC, the reason medical certificate about assault, this matter is not disputed in the report on the other hand the police authority not looked and appreciated the MLC.

Assume for the sake of argument, if the S.I Lady not assaulted me then how the enquiry came into existence, on the other hand in the report not mentioned about self-injured assault, thus MLC Certificate is a vital evidence about the assault caused by S.I Lady in her police station.

2. Again this incidence was very much captured in the camera footage, but to help the S.I Lady the higher officer and the Co-office and subordinates are helping her by giving false Evidence.

3. In number of occasions, I have repeatedly demanded report to provide camera footage and her mobile phone conversation, but they have not provided, it is against to them.

4. The so far evidence collected by police are independent, uninterested witnesses, on the other hand they are not one and same, hence no real picture came from their side.

5. According to police version they are telling that I came to police station and I had told that I will talk to senior officers and I left the mobile phone on table and proceeded to home, if this fact is correct then where is

the question of abusing me, assaulting me and insulting me will arise, on the other hand the police so far submitted the report as not mentioned what happened to my mobile phone according to their staff, they are stating that they have come to my to return my phone and take an acknowledgment from me. In case I had refused to collect my phone what was the cause of action in law, in this connection they have not booked unclaimed property case against my mobile phone and this matter has not reported to higher authorities and to the court, this shows that they acted against the law and committed crime, now they very much police is interested in giving trouble by booking false NCR 73/2020 against me, now the opposite police authority misguiding fact to court and trying to get order from the court to re-open NCR 73/2020 to give maximum trouble to me take revenge for reporting this matter to court.

6. All witnesses are interested witness, they are trying to help lady S.I and saying as per S.I for false cooked up case, hence this honorable court not to except the false report, submitted by police authority and I pray this honorable court to conduct independent enquiry with me and with my defense witness and call for camera footage and mobile conversation of Lady S.I and other witnesses by this honorable authority and provide justice and take proper action against Lady S.I for illegal activities against, for taking law into her hand and exceeding power for assault, degrade, insult, manhandle, Senior citizen and helpless citizens like me."

ದೂರು, ಉಪ ಪೊಲೀಸ್ ಆಯುಕ್ತರು, ಆಗ್ನೇಯ ವಿಭಾಗ, ಬೆಂಗಳೂರು ರವರ ವರದಿ ಮತ್ತು ದೂರುದಾರರ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ತಿಲಕ್ ನಗರ ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಸವಿನಯ ಜಯರಾಜ್‌ರವರು ಹಿರಿಯ ನಾಗರೀಕಳಾದ ತನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿ ಮಾನಸಿಕವಾಗಿ ಕಿರುಕುಳ ನೀಡಿದ್ದು, ಪೊಲೀಸ್

ಮೇಲಾಧಿಕಾರಿಗಳು ಅವರ ಅಧೀನ ಸಿಬ್ಬಂದಿಯನ್ನು ರಕ್ಷಿಸುವ ಸಲುವಾಗಿ ಆಯೋಗಕ್ಕೆ ಸುಳ್ಳು ವರದಿಯನ್ನು ಸಲ್ಲಿಸಿರುತ್ತಾರೆಂದು ಇತ್ಯಾದಿಯಾಗಿ ದೂರುದಾರರು ಅವರ ಅಭಿಪ್ರಾಯದಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದರಿಂದ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993 ಕಲಂ 13 ರಡಿ ಶ್ರೀಮತಿ ಸವಿನಯ ಜಯರಾಜ್, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ತಿಲಕ್‌ನಗರ ಪೊಲೀಸ್ ಠಾಣೆ ರವರಿಗೆ ಆಯೋಗದ ಮುಂದೆ ಖುದ್ದು ಹಾಜರಾಗಿ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಹಾಗೂ ದೂರುದಾರರಿಗೂ ಕೂಡ ಆಯೋಗದ ಮುಂದೆ ಹಾಜರಾಗುವಂತೆ ನೋಟೀಸ್ ಜಾರಿ ಮಾಡಿದ್ದು, ದಿನಾಂಕ:12.04.2021 ರಂದು ಆಯೋಗದ ಮುಂದೆ ಶ್ರೀಮತಿ ಸವಿನಯ ಜಯರಾಜ್, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ತಿಲಕ್‌ನಗರ ಪೊಲೀಸ್ ಠಾಣೆ ಹಾಗೂ ದೂರುದಾರರಾದ ಶ್ರೀಮತಿ ಸಯಿದಾ ನಸ್ರೀನ್ ರವರುಗಳು ಖುದ್ದು ಹಾಜರಾಗಿ, ಅವರುಗಳ ಹೇಳಿಕೆಗಳನ್ನು ನೀಡಿರುತ್ತಾರೆ.

ದಿನಾಂಕ 12–04–2021ರಂದು ಶ್ರೀಮತಿ ಸವಿನಯ ಬಿ.ಜೆ., ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ತಿಲಕ್‌ನಗರ ಪೊಲೀಸ್ ಠಾಣೆ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಕೆಳಕಂಡಂತೆ ಇದೆ:

> "ನಾನು ಪ್ರಸ್ತುತ ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ.13.09.2020 ರಂದು ಮದ್ಯಾಹ್ನ ಸುಮಾರು 1.20 ಗಂಟೆಯಲ್ಲಿ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ, ಎಸ್.ಓ ಶ್ರೀ ರಾಮಣ್ಣನವರ ಟೇಬಲ್ ಬಳಿ ಯಾರೋ ಒಂದು ಹುಡುಗಿ ಜೋರಾಗಿ ಅಳುತ್ತಾ ಮಾತನಾಡುತ್ತಿರುವುದು ಕೇಳಿಸಿತು. ಆಗ ನಾನು ಶ್ರೀ ರಾಮಣ್ಣ ಹೆಚ್.ಸಿ–6843 ರವರನ್ನು ಕರೆದು ಏನಾಯಿತೆಂದು ಕೇಳಿದೆ, ಆಗ ಶ್ರೀ ರಾಮಣ್ಣ ಹೆಚ್.ಸಿ–6843 ರವರು ಹೊರಗಡೆ ಏನು ನಡೆಯುತ್ತಿದೆ ಎಂಬ ವಿಷಯವನ್ನು ನನಗೆ ಹೇಳಿ ಹೊರಗೆ ಹೋದಾಗ ಅದೇ ಸಮಯಕ್ಕೆ ಅಲ್ಲಿ ಬಂದಿದ್ದ ಶ್ರೀಮತಿ ಸಯಿದಾ ನಸ್ರೀನ್ ರವರು ನಾನು ನಿಮ್ಮ ಹತ್ತಿರ ಮಾತನಾಡುವುದಿಲ್ಲ, ಸೀನಿಯರ್ ರವರ ಮಾತನಾಡುತ್ತೇನೆ ಎಂದು ಹೇಳಿದಾಗ, ಶ್ರೀ ರಾಮಣ್ಣ ಹೆಚ್.ಸಿ–6843 ರವರು ಒಳಗೆ ನನ್ನ ಛೇಂಬರ್‌ಗೆ ಶ್ರೀಮತಿ ಉಷಾ ಹಾಗೂ ಶ್ರೀಮತಿ ಸಯಿದಾ ನಸ್ರೀನ್ ರವರಿಬ್ಬರನ್ನು ಕರೆದು ಕೊಂಡು ಬಂದಾಗ ಇಬ್ಬರನ್ನು ಕೂರಿಸಿ ಮಾತನಾಡಿಸುತ್ತಿದ್ದಾಗ, ಶ್ರೀಮತಿ ಉಷಾ ರವರು ನಾನು ಇವರ ಮನೆಯಲ್ಲಿ ಇದ್ದು, ಮನೆಯನ್ನು ಖಾಲಿ ಮಾಡಿದ್ದು, 50 ಸಾವಿರ ಅಡ್ವಾನ್ಸ್ ಹಣವನ್ನು ನನಗೆ ಕೊಟ್ಟಿದ್ದಾರೆ. ಆದರೆ ಉಳಿದ 30 ಸಾವಿರ

ಹಣವನ್ನು ಆಮೇಲೆ ಕೊಡುತ್ತೇನೆ ಎಂದು ಹೇಳಿ ಕೊಡಲಿಲ್ಲ. ಸ್ವಲ್ಪ ದಿನ ಕಳೆದ ನಂತರ ಮನೆಯ ಪೈಂಟ್ ಮತ್ತು ರಿಪೇರಿಗೆ 17 ಸಾವಿರ ಹಣವನ್ನು ಹಿಡಿದು ಇನ್ನ ಉಳಿದ 13 ಸಾವಿರ ಹಣವನ್ನು ಕೊಡುತ್ತೇನೆ ಎಂದು ಹೇಳಿ ಕೊಡಲಿಲ್ಲವೆಂದು ಹಾಗೂ ಇದರ ಬಗ್ಗೆ ಎಷ್ಟೇ ಬಾರಿ ಕೇಳಿಕೊಂಡರೂ ಸಹ ಶ್ರೀಮತಿ ನಸ್ರೀನ್ ಮತ್ತು ಅವರ ಮಗ ಹಣ ಕೊಡದೇ ಸಬೂಬು ಹೇಳುತ್ತಲೇ ಬಂದರು. ಶ್ರೀಮತಿ ಉಷಾರವರು ಹೇಳಿದರು. ಹಾಗೂ ಉಷಾರವರು ನಾನು ಠಾಣೆಗೆ ಬರುವ ಮುಂಚೆ ಶ್ರೀಮತಿ ಸಯಿದಾ ನಸ್ರೀನ್ ಮನೆಗೆ ಹೋಗಿ ಉಳಿಕೆ 13 ಸಾವಿರ ಹಣವನ್ನು ಕೇಳಿದಾಗ ಅವರು ನನ್ನ ಹಣವನ್ನು ಕೊಡಲಿಲ್ಲವೆಂದು ಉಷಾರವರು ಹೇಳುತ್ತಿರುವಾಗಲೇ ಮಾತಿಗೆ ಮಾತು ಮಾತಾಡುತ್ತಾ ವಾಗ್ವಾದ ಮಾಡಲು ಪ್ರಾರಂಭಿಸಿದರು. ಅದಕ್ಕೆ ನಾನು ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ನಿಮಗೆ ವಯಸ್ಸಾಗಿದೆ, ಯಾಕೆ ಅಷ್ಟು ಜೋರಾಗಿ ಕೂಗಾಡುತ್ತೀರಾ? ನೀವು ಸ್ಟೇಷನ್‌ನಲ್ಲಿಯೇ ಇಷ್ಟು ಜೋರಾಗಿ ಕೂಗಾಡುತ್ತಿದ್ದೀರಾ ಅಂದರೆ ನಿಮ್ಮ ಮನೆಯ ಹತ್ತಿರ ಬಂದ ಉಷಾರವರ ಮೇಲೆ ಯಾಕೆ ಗಲಾಟೆ ಮಾಡಿರುವುದಿಲ್ಲ ಎಂದು ಹೇಳಿ, ಅವರಿಗೆ ಸಮಾಧಾನ ಮಾಡಲು ಪ್ರಯತ್ನಿಸಿದರೂ ಸಹ ಅವರು ಸಮಾಧಾನವಾಗದೇ ಇದ್ದು, ಆಗ ಅವರ ಮಗಳು ರೇಷ್ಮ ರವರು ನಾನು ಮಾತನಾಡುತ್ತೇನೆ ಎಂದು ಹೇಳಿ, ನಮ್ಮ ತಾಯಿಯವರಿಗೆ ಬಿ.ಪಿ ಹಾಗೂ ಉಸಿರಾಟದ ಸಮಸ್ಯೆ ಇದೆ ಎಂದು ಹೇಳಿದರು. ಆಗ ಅವರನ್ನು ಹೊರಗೆ ಐ.ಟಿ ಟೇಬಲ್ ಹತ್ತಿರ ಕೂರಿಸಲಾಯ್ತು. ಆಗ ಅಲ್ಲಿ ಇಬ್ಬರು ಮಹಿಳಾ ಪೇದೆಗಳು ಇದ್ದರು. ಶ್ರೀಮತಿ ಸಯಿದಾ ನಸ್ರೀನ್‌ರವರ ಮಗಳು ರೇಷ್ಮ ರವರು ನಾನು ಉಷಾರವರಿಗೆ 13 ಸಾವಿರ ರೂಗಳನ್ನು ಕೊಡುತ್ತೇನೆ ಎಂದು ಹೇಳಿದರು. ಐ.ಟಿ ಟೇಬಲ್ ಹತ್ತಿರ ಕುಳಿತ್ತಿದ್ದ ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ಸುಸ್ತಾಗುತ್ತಿದೆ ಎಂದು ಹೇಳುತ್ತಿದ್ದಾರೆಂದು ಮಹಿಳಾ ಪೇದೆ ರೇಖಾರವರು ನನ್ನ ಬಳಿ ಹೇಳಿದರು. ಆಗ ಅವರ ಮಗಳು ನನ್ನ ತಾಯಿಗೆ ಬಿ.ಪಿ ಮತ್ತು ಉಸಿರಾಟದ ತೊಂದರೆ ಇದೆ. ಉಷಾರವರ ಸಮಸ್ಯೆಯನ್ನು ನಂತರ ಬಂದು ಬಗೆಹರಿಸುವುದಾಗಿ ಹೇಳಿ ಹೊರಗೆ ಹೋದಾಗ ಒಂದು ಆಟೋದಲ್ಲಿ ಶ್ರೀಮತಿ ಸಯಿದಾ ನಸ್ರೀನ್ ರವರ ಗಂಡ ಮತ್ತು ಇನ್ನೊಬ್ಬ ವ್ಯಕ್ತಿ ಆಟೋದಲ್ಲಿ ಕರೆದುಕೊಂಡು ಹೋದರು. ಆಗಲೂ ಶ್ರೀಮತಿ ಸಯಿದಾ ನಸ್ರೀನ್ ರವರು ಕಮೀಷನರ್‌ಗೆ ಕಂಪ್ಲೈಂಟ್ ಮಾಡುತ್ತೇನೆಂದು ಕೂಗಾಡುತ್ತಲೇ ಆಟೋದಲ್ಲಿ ಹೋದರು. ಆದಾದ ನಂತರ ಐ.ಟಿ ಟೇಬಲ್ ಹತ್ತಿರ ಅವರು ಫೋನ್ ಅನ್ನು ಬಿಟ್ಟು ಹೋಗಿದ್ದರು. ಅದನ್ನು ನಮ್ಮ ಸ್ಟಾಫ್ ಒಬ್ಬರು ಆ ಮೊಬೈಲ್ ಕೈಯಲ್ಲಿ ಕೊಟ್ಟರು. ಆಗ ನಾನು ಸ್ಟೇಷನ್ ಆಫೀಸರ್

ಶ್ರೀ ರಾಮಣ್ಣ ನವರಿಗೆ ಅವರು ಫೋನ್ ಬಿಟ್ಟು ಹೋಗಿದ್ದಾರೆ. ಅವರು ಯಾರಾದರು ಬಂದರೆ ಅವರು ಮೊಬೈಲ್ ಅವರಿಗೆ ತಲುಪಿಸಿ ಎಂದು ಹೇಳಿದೆ. ನಂತರ ನಾನು ನಡೆದ ವಿಷಯವನ್ನು ಸಂಪೂರ್ಣವಾಗಿ ಠಾಣೆಯ ಡೈರಿಯಲ್ಲಿ ದಾಖಲಿಸಿರುತ್ತೇನೆ.

ತದನಂತರ ನಾನು ಅದೇ ದಿನ ಸಂಜೆ, ಠಾಣೆಯ ಕರ್ತವ್ಯದಲ್ಲಿದ್ದ ಇನ್ಸ್‌ಪೆಕ್ಟರ್ ರವರ ಹತ್ತಿರ ಎಲ್ಲಾ ವಿಷಯವನ್ನು ತಿಳಿಸಿದ್ದರಿಂದ, ಪಿ.ಐ ರವರು ಹೆಚ್‌ಸಿ–9614 ಫಕ್ರು ಸಾಬ್ ರವರ ಹತ್ತಿರ ಮೊಬೈಲ್ ಕೊಟ್ಟು ಶ್ರೀಮತಿ ನಸ್ರೀನ್ ರವರಿಗೆ ತಲುಪಿಸಲು ತಿಳಿಸಿ ಕಳುಹಿಸಿರುತ್ತಾರೆ. ಆದರೆ ಅವರು ಫೋನ್ ಅನ್ನು ತೆಗೆದುಕೊಂಡಿರುವುದಿಲ್ಲ. ಪುನ: ಫೋನ್ ನನ್ನ ಬಳಿ ತಂದು ಕೊಟ್ಟಾಗ ನಾನು ಫೋನ್ ಲಾಗ್ ಚೆಕ್ ಮಾಡಿದಾಗ ಅವರ ಮಗಳು ಮೌಸಿನ್ ರವರ ನಂಬರ್ ಕರೆ ಮಾಡಿದೆ, ಅವರು ಫೋನ್ ತೆಗೆಯದೇ ಇದ್ದಾಗ, ಫೋನ್‌ನ ಲಾಗ್‌ನಲ್ಲಿ ಮೊದಲ ಕರೆ ಮಾಡಿದಾಗ ಅವರು ಇಲ್ಲ, ಅವರು ಆಸ್ಪತ್ರೆಯಲ್ಲಿದ್ದಾರೆ ಎಂದು ಹೇಳಿದರು, ಆಗ ನಾನು ಯಾವ ಆಸ್ಪತ್ರೆ ಎಂದು ಕೇಳಿದಾಗ ಅವರು Medicure ಆಸ್ಪತ್ರೆ ಎಂದು ಹೇಳಿದರು. ನಂತರ ಅವರು ಆಸ್ಪತ್ರೆಯಿಂದ ಬಂದ ನಂತಗರ ಮೊಬೈಲ್ ಅನ್ನು ತೆಗೆದುಕೊಂಡು ಹೋಗುತ್ತಾರೆಂದು ಭಾವಿಸಿ, ಪಿ.ಎಫ್‌ನಲ್ಲಿ ನಮೂದಿಸದೇ ಪುನ: ಹೆಚ್‌ಸಿ 6843 ರಾಮಣ್ಣನವರ ಬಳಿ ನೀಡಿ, ಅವರು ಬಂದು ಕೇಳಿದ್ದಲ್ಲಿ ವಾಪಸ್ ಕೊಡಲು ತಿಳಿಸಿ, ನೀಡಿರುತ್ತೇನೆ.

ಶ್ರೀಮತಿ ಸಯಿದಾ ನಸ್ರೀನ್ ರವರನ್ನು ಸ್ಟೇಷನ್ ಆಫೀಸರ್ ಶ್ರೀ ರಾಮಣ್ಣನವರು ಠಾಣೆಯ ಎನ್‌ಸಿಆರ್ ನಂ. 73/2020 ನಲ್ಲಿ ಕರೆಸಿದ್ದರು. ನನಗೆ ಎನ್‌ಸಿಆರ್ ಕೇಸನಲ್ಲಿ ವಿಚಾರಣೆ ಮಾಡಲು ಯಾವ ಅಧಿಕಾರವಿಲ್ಲ. ಆದರೂ ಸಹ ಠಾಣಾ ಸರಹದ್ದಿನಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕ ಶಾಂತಿ ಕಾಪಾಡಲು ವಿಚಾರಣೆಯನ್ನು ಕೈಗೊಂಡಿರುತ್ತೇನೆ."

ದಿನಾಂಕ 12–04–2021ರಂದು ದೂರುದಾರರಾದ ಶ್ರೀಮತಿ ಸಯಿದಾ ನಸ್ರೀನ್ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಕೆಳಕಂಡಂತೆ ಇದೆ:

"…..ನಮ್ಮ ಮನೆಯಲ್ಲಿ ಶ್ರೀಮತಿ ಉಷಾರವರು 4 ವರ್ಷಗಳಿಂದ ಬಾಡಿಗೆಗೆ ಇದ್ದು, ಜನವರಿ 2020 ಲಾಕ್‌ಡೌನ್ ಸಮಯದ ಮುಂಚೆಯೇ ಮನೆ ಖಾಲಿ ಮಾಡಿಕೊಂಡು ಹೋಗಿರುತ್ತಾರೆ. ಅವರಿಗೆ 80 ಸಾವಿರ ಅಡ್ವಾನ್ಸ್‌ನಲ್ಲಿ

50 ಸಾವಿರ ಕೊಟ್ಟು, ಇನ್ನು ಉಳಿದ 30 ಸಾವಿರ ಹಣದಲ್ಲಿ 2 ತಿಂಗಳ ಬಾಡಿಗೆ ಹಾಗೂ ಮನೆಯ ಪೈಂಟ್ ಹಾಗೂ ರಿಪೇರಿಗೆಂದು ಹಿಡಿದು ಕೊಟ್ಟಿದ್ದೆವು. ನಂತರ ತಿಲಕ್ ನಗರ ಪೊಲೀಸ್ ಠಾಣೆಯಿಂದ ಠಾಣೆಗೆ ಬರುವಂತೆ ಕರೆಸಿದ್ದು, ನಾನು ದಿನಾಂಕ.13.09.2020ರಂದು ಠಾಣೆಗೆ ಹೋಗಿದ್ದು, ಅಲ್ಲಿ ಒಬ್ಬ ಪೊಲೀಸ್ ಹೊರಗಡೆ ನಿಂತಿದ್ದರು. ಆಗ ನಾನು ಅವರಿಗೆ ಏನು ವಿಷಯ ಎಂದು ಕೇಳಿದಾಗ ಅವರು ನಿಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ಉಷಾ ಎಂಬುವವರಿಗೆ ನೀವು ಹಣ ಕೊಡಬೇಕೆಂದು ದೂರು ನೀಡಿದ್ದಾರೆ. ಅದರ ಬಗ್ಗೆ ನಿಮ್ಮನ್ನು ಠಾಣೆಗೆ ಕರೆಸಲಾಗಿದೆ ಎಂದು ಹೇಳಿ, ಒಳಗೆ ಹೋಗಿ ಮೇಡಂ ಇದ್ದಾರೆ ಎಂದು ಹೇಳಿ ಕಳುಹಿಸಿದರು. ಒಳಗೆ ಹೋದಾಗ, ಶ್ರೀಮತಿ ಸವಿನಯ ಮೇಡಂ ಹತ್ತಿರ ಎರಡು ಮಾತು ಮಾತನಾಡುತ್ತಿರುವಾಗಲೇ ಮೇಡಂರವರು ಏನೇ ಉಷಾರವರಿಗೆ ಚೀಟ್ ಮಾಡುತ್ತೀಯಾ ಎಂದು ನನ್ನ ಕಪ್ಪಾಳಕ್ಕೆ ಹೊಡೆದರು. ಉಷಾರವರ ಕಜಿನ್ ಸಿಸ್ಟರ್ ಒಬ್ಬರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಇಂಥವರಿಗೆ ನೀನು ಚೀಟ್ ಮಾಡುತ್ತಿಯಾ ಎಂದು ಬೈಯುತ್ತಿದ್ದಾಗ ನಾನು ಯಾಕೆ ಮೇಡಂ ನನಗೆ ಹೊಡೆಯುತ್ತೀರಾ? ಎಂದು ಕೇಳಿದಾಗ ಅವರು ಇನ್ನೊಂದು ಕೆನ್ನೆಗೆ ಹೊಡೆದರು. ನಾನು ಅಲ್ಲೇ ತಲೆ ಸುತ್ತು ಬಂದು ಕೆಳಗೆ ಕೂತುಕೊಂಡೆ. ಮತ್ತೇ ಮೇಡಂ ರವರು ಅವರ ಕಾಲಿನಿಂದ ನನಗೆ ಒದ್ದು, ಏನೇ ಆಕ್ಟಿಂಗ್ ಮಾಡ್ತಿಯಾ ಎಂದು ಬೈದರು. ನಂತರ 3 ಜನ ಮಹಿಳಾ ಪೊಲೀಸರನ್ನು ಕರೆದು ಡೋರ್ ಹಾಕು ಎಂದು ಹೇಳಿ, ನನ್ನ ಕೈಯಲ್ಲಿ ಇದ್ದ ಪೋನ್ ಅನ್ನು ಕಿತ್ತು ಕೊಂಡು ನಿನ್ನ ಫೋನ್ ಸೀಜ್ ಮಾಡುತ್ತೇನೆ ಮತ್ತು ನಿಮ್ಮ ಮನೆಯನ್ನು ಸೀಜ್ ಮಾಡುತ್ತೇನೆಂದು ಹೇಳಿ ಅಲ್ಲೆ ಇದ್ದ ಮೂರು ಜನ ಮಹಿಳಾ ಪೊಲೀಸರಿಗೆ ನನ್ನನ್ನು ಲಾಕಪ್‌ಗೆ ಹಾಕಿ ಎಂದು ಹೇಳಿದರು. ಆಗ ಹೊರಗಡೆ ಇದ್ದ ನನ್ನ ಮೊಮ್ಮಗ ಸುಫಿಯನ್ ನನ್ನ ಮಗಳು ರೇಷ್ಮಳಿಗೆ ಕರೆ ಮಾಡಿ ಕರೆಸಿದ್ದು, ಆಗ ನನ್ನ ಮಗಳು ರೇಷ್ಮ ಬಂದು, ನನ್ನ ತಾಯಿಗೆ ಹುಷಾರಿಲ್ಲ, ಯಾಕೆ ಅವರಿಗೆ ಹೊಡೆಯುತ್ತೀರಾ ಎಂದು ಕೇಳಿದಾಗ, ಮೇಡಂ ಅವರು ಜಾಸ್ತಿ ಮಾತನಾಡಿದರೆ ನಿನ್ನನ್ನು ಒಳಗೆ ಹಾಕುತ್ತೇನೆ ಎಂದು ಹೇಳಿದರು. ಅದಕ್ಕೆ ನನ್ನ ಮಗಳು ಫೋನ್ ಕೊಡಿ ಎಂದು ಕೇಳಿದ್ದಕ್ಕೆ, ಹಣ ಕೊಡಿ ಫೋನ್ ಕೊಡುತ್ತೇನೆ ಎಂದು ಹೇಳಿದರು. ಆಗ ನನ್ನ ಮಗಳು ನನ್ನ ಗಂಡನಿಗೆ ಫೋನ್ ಮಾಡಿ ಠಾಣೆಗೆ ಕರೆಸಿದರು.

ನಂತರ ಠಾಣೆಗೆ ನನ್ನ ಗಂಡ ಹಾಗೂ ನನ್ನ ಅಣ್ಣ ಬಂದರು. ನನಗೆ ಉಸಿರಾಟದ ತೊಂದರೆ ಜಾಸ್ತಿಯಾಗಿದ್ದರಿಂದ ನನ್ನನ್ನು ಠಾಣೆಯಿಂದ

ಸಂಜಯ್‌ಗಾಂಧಿ ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು ಇಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ ನಂತರ ನನ್ನನ್ನು ಮನೆಗೆ ಕರೆದುಕೊಂಡು ಬಂದರು.

ನನ್ನ ಮೂಲ(original) ಗಾಯದ ಪ್ರಮಾಣ ಪತ್ರವನ್ನು ಸಂಜಯ್‌ಗಾಂಧಿ ಆಸ್ಪತ್ರೆಯವರು ತಿಲಕ್ ನಗರ ಪೊಲೀಸ್ ಠಾಣೆಗೆ ಕಳುಹಿಸಿದರು. ನಾನು ಈ ಘಟನೆಯಿಂದ ಮಾನಸಿಕವಾಗಿ ಬಳುತ್ತಿದ್ದು, ಪುನ: 7 ದಿನ ಫಿನಿಕ್ಸ್ ಆಸ್ಪತ್ರೆಯಲ್ಲಿ ದಾಖಲಾದೆ.

ಶ್ರೀಮತಿ ಸವಿನಯ ಮೇಡಂ ಹೇಳಿಕೆಗೆ ನನ್ನ ಪ್ರತ್ಯುತ್ತರ/ನನ್ನ ಮುಂದುವರೆದ ಹೇಳಿಕೆ:

ಮೇಡಂ ರವರು ನಾನು ಅವರ ಛೇಂಬರ್ ಒಳಗೆ ಹೋಗಿ ನಮಸ್ತೆ ಎಂದು ಹೇಳುತ್ತಿದ್ದಾಗಲೇ ಕಾರಣ ಕೇಳದೇ ನನ್ನ ಕಪ್ಪಾಳಕ್ಕೆ ಹೊಡೆದರು. ಅವರ ಹೇಳಿಕೆಯ ಪ್ರಕಾರ ನಾನು ಐ.ಟಿ ಟೇಬಲ್ ಹತ್ತಿರ ನನ್ನ ಫೋನ್ ಅನ್ನು ಬಿಟ್ಟು ಹೋದೆ ಎನ್ನುವುದು ಸುಳ್ಳು. ಮೇಡಂ ರವರೇ ನನ್ನ ಕೈಯಿಂದ ಫೋನ್ ಅನ್ನು ಕಿತ್ತುಕೊಂಡರು. ಮತ್ತು ಮೇಡಂ ರವರ ಹೇಳಿಕೆಯ ಪ್ರಕಾರ ಠಾಣೆಯಲ್ಲಿ ನಾನು ಕೂಗಾಡಲಿಲ್ಲ. ಮತ್ತು ನಾನು ಆಟೋದಲ್ಲಿ ಹೋಗುವಾಗಲೂ ಕೂಗಾಡಲಿಲ್ಲ, ಏಕೆಂದರೆ ನನಗೆ ಹುಷಾರಿಲ್ಲದ ಕಾರಣ ಮಾತಾನಾಡಲು ಆಗುತ್ತಿರಲಿಲ್ಲ, ನಾನು ಕೂಗಾಡಲು ಸಾಧ್ಯವೇ ಇಲ್ಲ. ಮೇಡಂ ರವರ ಹೇಳಿಕೆ ಪ್ರಕಾರ ನಮ್ಮ ಮನೆಗೆ ನನ್ನ ಫೋನ್ ಅನ್ನು ತೆಗೆದುಕೊಂಡು ಕೊಡಲು ಬಂದಾಗ ನಾನು ತೆಗೆದುಕೊಳ್ಳಲಿಲ್ಲ ಎನ್ನುವುದು ಸುಳ್ಳು. ಉಷಾ ರವರು ನಮ್ಮ ಮನೆಗೆ ಬಂದಿದ್ದರು ಎಂದು ಹೇಳಿಕೆ ನೀಡಿರುವುದು ಸುಳ್ಳು. ನನ್ನ ಮನೆ ಇರುವುದು ಡಬಲ್ ರೋಡ್‌ನಲ್ಲಿ. ಬಾಡಿಗೆ ಮನೆ ಇರುವುದು ತಿಲಕ್ ನಗರದಲ್ಲಿ, ಉಷಾರವರಿಗೆ ನಮ್ಮ ಡಬಲ್‌ರೋಡ್‌ನಲ್ಲಿರುವ ಮನೆಯ ಅಡ್ರಸ್ ಗೊತ್ತಿಲ್ಲ."

ಮುಂದುವರೆದು, ಆಯೋಗದ ಡಿವೈ.ಎಸ್.ಪಿ ಆದ ಶ್ರೀ ಮಂಜುನಾಥ್ ರವರಿಗೆ (1) ಸದರಿ ಪ್ರಕರಣದಲ್ಲಿ ದಿನಾಂಕ 08–10–2020 ರಂದು ಜಯನಗರ ಜನರಲ್ ಆಸ್ಪತ್ರೆಯಿಂದ ಶ್ರೀಮತಿ ಸಯಿದಾ ನಸ್ರೀನ್ ರವರ  ಗಾಯದ ಪ್ರಮಾಣ ಪತ್ರವನ್ನು (ಎಂ.ಎಲ್.ಸಿ) ತಿಲಕನಗರ ಪೊಲೀಸ್ ಠಾಣೆಗೆ ಕಳುಹಿಸಿದ್ದು, ಸದರಿ ಗಾಯದ ಪ್ರಮಾಣ ಪತ್ರದ ಸಂಬಂಧ ತಿಲಕನಗರ ಪೊಲೀಸ್ ಠಾಣೆಯಲ್ಲಿ ಏನು ಕ್ರಮ ಜರುಗಿಸಿರುತ್ತಾರೆ?; (2)ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರಾದ ಶ್ರೀಮತಿ

ಸವಿನಯ ಬಿ.ಜೆ ರವರು ತಿಲಕನಗರ ಪೊಲೀಸ್ ಠಾಣೆಯಲ್ಲಿ ಸಿಸಿ ಕ್ಯಾಮರ ಅಳವಡಿಸಿರುವುದಾಗಿ ತಿಳಿಸಿದ್ದು, ಸಿಸಿಟಿವಿ ಪುಟೇಜ್ ಬಗ್ಗೆ ಪರಿಶೀಲನೆ ನಡೆಸುವುದು. ಸದರಿ ದೂರಿನಲ್ಲಿರುವ ಘಟನೆಯ ಬಗ್ಗೆ ಶ್ರೀಮತಿ ಸವಿನಯ ಬಿ.ಜೆ ರವರು ಸಿಸಿ ಟಿವಿ ರೆಕಾರ್ಡ್ ಆಗಿರುವುದಿಲ್ಲ ಎಂದು ತಿಳಿಸಿದ್ದು, ಈ ಬಗ್ಗೆ ಪರಿಶೀಲನೆ ನಡೆಸುವುದು. (3) ಪೊಲೀಸರಿಗೆ ಸಿ.ಆರ್.ಪಿ.ಸಿ ಕಲಂ 155 ರೀತ್ಯ ಅಸಂಜ್ಞೆಯ ಅಪರಾಧ ಪ್ರಕರಣದಲ್ಲಿ ವಿಚಾರಣೆ ಮಾಡುವ ಅಧಿಕಾರ ಇರುವುದಿಲ್ಲ. ಆದರೆ ತಿಲಕನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಎನ್.ಸಿ.ಆರ್ ನಂ. 73/2020 ರಲ್ಲಿ ದೂರುದಾರರಾದ ಶ್ರೀಮತಿ ಸಯಿದಾ ನಸ್ರೀನ್ ರವರನ್ನು ಯಾವ ಆಧಾರದ ಮೇಲೆ ವಿಚಾರಣೆ ಮಾಡಿರುತ್ತಾರೆ ಎಂಬುದರ ಬಗ್ಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಿರುತ್ತದೆ.

ಅದರಂತೆ, ದಿನಾಂಕ 25–08–2021 ರ ಪತ್ರದನ್ವಯ ಆಯೋಗದ ಡಿವೈ.ಎಸ್.ಪಿ ಆದ ಶ್ರೀ ಮಂಜುನಾಥ್ ರವರು ವರದಿ ಸಲ್ಲಿಸಿದ್ದು, ಅವರ ಅಭಿಪ್ರಾಯವು ಕೆಳಕಂಡಂತಿದೆ:

> "ದೂರುದಾರರಾದ ಶ್ರೀಮತಿ ಸೈಯಿದಾ ನಸ್ರೀನ್ ರವರು ದೂರು ಮತ್ತು ಹೇಳಿಕೆಯಲ್ಲಿ ತಮ್ಮ ಬಾಡಿಗೆದಾರರಾದ ಶ್ರೀಮತಿ ಉಷಾ ರವರು ತಿಲಕನಗರ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ಪಿ.ಎಸ್.ಐ ಶ್ರೀಮತಿ ಸವಿನಯ ರವರು ದಿನಾಂಕ 13–09–2020 ರಂದು ಠಾಣೆಗೆ ಕರೆಯಿಸಿ, ಬಾಡಿಗೆ ಅಡ್ವಾನ್ಸ್ ಹಣವನ್ನು ಶ್ರೀಮತಿ ಉಷಾ ರವರಿಗೆ ನೀಡುವಂತೆ ಬೆದರಿಕೆ ಹಾಕಿ, ಅವಾಚ್ಯ ಶಬ್ದಗಳಿಂದ ಬೈಯ್ದು, ಎರಡು ಕಪ್ಪಾಳಕ್ಕೆ ಹೊಡೆದು, ಬಲತೊಡೆಗೆ ಕಾಲಿನಿಂದ ಒದ್ದು, ಮೊಬೈಲ್ ಫೋನನ್ನು ಕಿತ್ತುಕೊಂಡಿರುತ್ತಾರೆಂದು ಆರೋಪಿಸಿರುತ್ತಾರೆ.
>
> ದೂರುದಾರರ ಆರೋಪಗಳಿಗೆ ಸಂಬಂಧಿಸಿದಂತೆ ಪಿ.ಎಸ್.ಐ ಶ್ರೀಮತಿ ಸವಿನಯ ರವರನ್ನು ವಿಚಾರಣೆ ಮಾಡಲಾಗಿ ಶ್ರೀಮತಿ ಉಷಾ ರವರು ದಿನಾಂಕ 13–09–2020 ರಂದು ನೀಡಿದ ದೂರಿನ ಮೇರೆಗೆ ಠಾಣಾ ಎನ್.ಸಿ.ಆರ್ ನಂ 73/2020 ರಲ್ಲಿ ದಾಖಲಿಸಿಕೊಂಡು ಎದುರುದಾರರಾದ ಶ್ರೀಮತಿ ಸೈಯಿದಾ ನಸ್ರೀನ್ ರವರನ್ನು ಮತ್ತು ಶ್ರೀಮತಿ ಉಷಾ ರವರನ್ನು ವಿಚಾರಣೆ ಮಾಡುವ ಸಮಯದಲ್ಲಿ ಶ್ರೀಮತಿ ಸೈಯಿದಾ ನಸ್ರೀನ್ ರವರು ಏರು ಧ್ವನಿಯಲ್ಲಿ ಮಾತನಾಡಿ ನೀವು ಶ್ರೀಮತಿ ಉಷಾರವರಿಗೆ ಸಪೋರ್ಟ್ ಮಾಡುತ್ತಿರಾ ಎಂದು ಕೂಗಾಡಿದ್ದು, ಅವರ

ಮಗಳಾದ ಶ್ರೀಮತಿ ಮೌಸಿನಾ ರವರು ಠಾಣೆಗೆ ಬಂದು ನಮ್ಮ ತಾಯಿಗೆ ಆರೋಗ್ಯ ಸಮಸ್ಯೆ ಇದೆ ಎಂದು ಹೇಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅವರು ಹೋಗುವಾಗ ಅವರು ಕುಳಿತಿದ್ದ ಜಾಗದಲ್ಲಿ ಮೊಬೈಲ್‌ನ್ನು ಬಿಟ್ಟುಹೋಗಿದ್ದು, ನಂತರ ಸದರಿ ಮೊಬೈಲ್‌ನ್ನು ಅವರಿಗೆ ವಾಪಸ್ಸು ಕೊಡಲು ಹೋದಾಗ ಅವರು ಸ್ವೀಕರಿಸಲು ನಿರಾಕರಿಸಿರುತ್ತಾರೆ. ನಂತರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಗಿರೀಶ್ ರವರಿಂದ ಮೊಬೈಲ್‌ನ್ನು ಸ್ವೀಕರಿಸಿರುತ್ತಾರೆ. ದೂರುದಾರರಿಗೆ ಠಾಣೆಯಲ್ಲಿ ಯಾವುದೇ ರೀತಿಯಲ್ಲಿ ಅವಾಚ್ಯ ಶಬ್ದಗಳಿಂದ ಬೈಯುವುದಾಗಲೀ, ಹಲ್ಲೆ ಮಾಡುವುದಾಗಲೀ, ಮಾಡಿರುವುದಿಲ್ಲ, ಅವರು ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ.

ಘಟನೆ ನಡೆದ ದಿನವಾದ ದಿನಾಂಕ 13–09–2020 ರಂದು ತಿಲಕನಗರ ಪೊಲೀಸ್ ಠಾಣೆಯಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರದ ಬಗ್ಗೆ ಮತ್ತು ಕಲಂ 155 ಸಿ.ಆರ್.ಪಿ.ಸಿ ರೀತ್ಯ ಅಸಂಜ್ಞೆಯ ಅಪರಾಧ ಪ್ರಕರಣದಲ್ಲಿ ಪೊಲೀಸರು ತನಿಖೆ ಮಾಡುವ ಅಧಿಕಾರವಿರುವುದಿಲ್ಲ ಆದರೂ ಎನ್.ಸಿ.ಆರ್ ನಂ 73/2020 ಪ್ರಕರಣದಲ್ಲಿ ದೂರುದಾರರಾದ ಶ್ರೀಮತಿ ಸೈಯಿದಾ ನಸ್ರೀನ್ ರವರನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿರುವ ಬಗ್ಗೆ ಪಿ.ಎಸ್.ಐ ಸವಿನಯ ರವರನ್ನು ವಿಚಾರಣೆ ಮಾಡಲಾಗಿ ತಿಲಕನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ರವರು ಸ್ವಂತ ಖರ್ಚಿನಲ್ಲಿ ಠಾಣೆಯ ಒಳಗೆ ಮತ್ತು ಸ್ವಾಗತಕಾರರ ಜಾಗದ ಬಳಿ ನಡೆಯುವ ಸಿಬ್ಬಂದಿಗಳ ಕಾರ್ಯವೈಕರಿಗಳನ್ನು ನಿಯಂತ್ರಣ ಮಾಡಲು ಅಡಳಿತಾತ್ಮಕ ದೃಷ್ಠಿಯಿಂದ ಹಾಕಿಸಿದ್ದು, ಇದು ವೀಕ್ಷಿಸಲು ಮಾತ್ರ ಸಾದ್ಯವಿರುತ್ತದೆ. ಆದರೆ ಈ ಮಾಹಿತಿಯನ್ನು ಸಂಗ್ರಹಿಸಲು ಯಾವುದೇ ಡಿವಿಆರ್‌ನ್ನು ಅಳವಡಿಸಿರುವುದಿಲ್ಲ. ಠಾಣಾ ಎನ್.ಸಿ.ಆರ್ ನಂ 73/2020 ರಲ್ಲಿ ಪಿರ್ಯಾದಿ ಶ್ರೀಮತಿ ಉಷಾ ರವರು ಮತ್ತು ಅವರ ಮನೆ ಮಾಲೀಕರಾದ ಶ್ರೀಮತಿ ಸೈಯದಾ ನಸ್ರೀನ್ ರವರು ಬಾಡಿಗೆ ಅಡ್ವಾನ್ಸ್ ಹಣದ ವಿಚಾರವಾಗಿ ಮನೆ ಬಳಿ ಜಗಳ ಮಾಡಿಕೊಂಡು, ಶ್ರೀಮತಿ ಉಷಾ ರವರು ಠಾಣೆಗೆ ಬಂದು ದೂರು ನೀಡಿದ್ದು, ತಿಲಕನಗರ ಹಿಂದು ಮತ್ತು ಮುಸ್ಲಿಂ ಸಮುದಾಯದವರು ಹೆಚ್ಚಾಗಿ ವಾಸವಿದ್ದು, ಸೂಕ್ಷ್ಮ ಪ್ರದೇಶವಾಗಿರುವುದರಿಂದ (Communal Sensitive area) ಮನೆ ಬಳಿ ಮತ್ತೆ ಗಲಾಟೆಮಾಡಿಕೊಂಡು ಕಮ್ಯುನಲ್ ಗಲಾಟೆಗೆ ತಿರುಗಿ ಸಾರ್ವಜನಿಕರ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಗೆ ಭಂಗವುಂಟಾಗುವ ಸಾದ್ಯತೆ ಇದ್ದುದರಿಂದ ಉಭಯ ಪಾರ್ಟಿಗಳನ್ನು ವಿಚಾರಣೆ ಮಾಡಿ ಸೂಕ್ತ

ತಿಳುವಳಿಕೆ ನೀಡಿರುತ್ತೇನೆ ಬೇರೆ ಯಾವುದೇ ಉದ್ದೇಶವಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ.

ದೂರುದಾರರಾದ ಶ್ರೀಮತಿ ಸೈಯಿದಾ ನಸ್ರೀನ್ ರವರು ಜಯನಗರ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ವೈದ್ಯರಾದ ಡಾ. ಅಶ್ವಥ್ ನಾರಾಯಣ ರವರಿಂದ ಅಭಿಪ್ರಾಯ ವರದಿ ಪಡೆಯಲಾಗಿ ಅವರು ತಮ್ಮ ವರದಿಯಲ್ಲಿ ಶ್ರೀಮತಿ ಸೈಯದ ನಸ್ರೀನ್ ರವರು ದಿನಾಂಕ 13-09-2020 ರಂದು ಚಿಕಿತ್ಸೆ ಪಡೆದಿದ್ದು, ಪಿ.ಎಸ್.ಐ ಸವಿನಯ ರವರು ತಿಲಕನಗರ ಪೊಲೀಸ್ ಠಾಣೆಯಲ್ಲಿ ಹಲ್ಲೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಸದರಿಯವರಿಗೆ ಎರಡು ತೊಡೆಯ ಭಾಗದಲ್ಲಿ ಗಾಯಗಳಾಗಿದ್ದು, ಅವು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಸದರಿ ಗಾಯಗಳು ಕಾಲು ಮತ್ತು ಕೈಗಳಿಂದ ಹೊಡೆದರೆ ಆಗುವ ಸಾದ್ಯತೆ ಇರುತ್ತದೆ. ಅವುಗಳ ಆಯುಸ್ಸು 2 ರಿಂದ 18 ಗಂಟೆಯೊಳಗೆ ಆಗಿರಬಹುದು, ಸದರಿಯವರು ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುವುದರಿಂದ ಎಂ.ಎಲ್.ಸಿ ಮೆಮೋವನ್ನು ಪೊಲೀಸ್ ಠಾಣೆಗೆ ಕಳುಹಿಸಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

ದೂರುದಾರರು ಜಯನಗರ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಗಾಯದ ಪ್ರಮಾಣ ಪತ್ರ(ಎಂ.ಎಲ್.ಸಿ) ಮೆಮೋಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಹಾಗೂ ಠಾಣಾ ಸಿಸಿ ಟಿವಿ ಫುಟೇಜ್ ಬಗ್ಗೆ ಮಾಹಿತಿ ನೀಡುವಂತೆ ಪೊಲೀಸ್ ಇನ್ಸ್‌ಪೆಕ್ಟರ್, ತಿಲಕನಗರ ಪೊಲೀಸ್ ಠಾಣೆ ರವರಿಗೆ ಸೂಚಿಸಿದ್ದು, ಸದರಿಯವರು ತಮ್ಮ ವರದಿಯಲ್ಲಿ ಶ್ರೀಮತಿ ಸೈಯದ ನಸ್ರೀನ್ ರವರಿಗೆ ಸಂಬಂಧಿಸಿದಂತೆ ಜಯನಗರ ಜನರಲ್ ಆಸ್ಪತ್ರೆಯಿಂದ ಯಾವುದೇ ಎಂ.ಎಲ್.ಸಿ ಮೆಮೋವನ್ನು ಸ್ವೀಕರಿಸಿರುವುದಿಲ್ಲ, ತಿಲಕನಗರ ಪೊಲೀಸ್ ಠಾಣೆಯಲ್ಲಿ ಸಿಸಿ ಟಿವಿ ಕ್ಯಾಮರಾವನ್ನು ಪೊಲೀಸ್ ಇನ್ಸ್‌ಪೆಕ್ಟರ್ ರವರು ಸ್ವಂತ ಖರ್ಚಿನಲ್ಲಿ ಠಾಣೆಯ ಒಳಗಡೆ ಹಾಗೂ ಸ್ವಾಗತಕಾರರ ಜಾಗದ ಬಳಿ ನಡೆಯುವ ಸಿಬ್ಬಂದಿಗಳ ಕಾರ್ಯವೈಕರಿಯನ್ನು ನಿಯಂತ್ರಣ ಮಾಡಲು ಆಡಳಿತಾತ್ಮಕ ಹಿತದೃಷ್ಠಿಯಿಂದ ಹಾಕಿಸಿದ್ದು, ಇವು ವೀಕ್ಷಿಸಲು ಮಾತ್ರ ಸಾದ್ಯವಿರುತ್ತದೆ. ಆದರೆ ಈ ಕ್ಯಾಮರಾದಲ್ಲಿರುವ ಮಾಹಿತಿಯನ್ನು ಸಂಗ್ರಹಿಸಲು ಠಾಣೆಯಲ್ಲಿ ಯಾವುದೇ ಡಿ.ವಿ.ಆರ್‌ನ್ನು ಅಳವಡಿಸಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ."

ಪೊಲೀಸರು ತಿಳಿಸಿರುವ ಪ್ರಕಾರ ಶ್ರೀಮತಿ ಸಯಿದಾ ನಸ್ರೀನ್ ರವರು ವೈದ್ಯರ ಬಳಿ ಪರೀಕ್ಷಿಸಿಕೊಳ್ಳುವ 2–18 ರ ಘಂಟೆಗಳ ಹಿಂದೆಯೇ ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತದೆ. ಶ್ರೀಮತಿ ಸಯಿದಾ ನಸ್ರೀನ್ ರವರು ಯಾವಾಗ ಪೊಲೀಸ್ ಠಾಣೆಗೆ ತಲುಪಿದರು ಮತ್ತು ಎಂದು ದೌರ್ಜನ್ಯಕ್ಕೆ ಒಳಗಾದರೆಂದು ತಿಳಿಯಬೇಕಾಗಿರುವುದರಿಂದ, ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ನೋಟೀಸ್ ಜಾರಿ ಮಾಡಿದ್ದು, ದಿನಾಂಕ 27–09–2021 ರಂದು ಶ್ರೀಮತಿ ಸಯಿದಾ ನಸ್ರೀನ್ ರವರು ಆಯೋಗದ ಮುಂದೆ ಹಾಜರಾಗಿ ಅವರ ಮುಂದುವರೆದ ಹೇಳಿಕೆಯನ್ನು ನೀಡಿದ್ದು, ಅವರ ಹೇಳಿಕೆಯು ಕೆಳಕಂಡಂತೆ ಇದೆ:

> "ದಿನಾಂಕ.13.09.2020 ರಂದು ಮದ್ಯಾಹ್ನ 12.00 ಗಂಟೆಗೆ ತಿಲಕ್ ನಗರ ಠಾಣೆಯಿಂದ ಪಿ.ಎಸ್.ಐ ಶ್ರೀಮತಿ ಸವಿನಯ ಎಂಬುವರು ನನಗೆ ಫೋನ್ ಮಾಡಿ ನಿಮ್ಮ ಮೇಲೆ ದೂರು ಇದೆ ಈ ಕೂಡಲೇ ಠಾಣೆಗೆ ಬರುವಂತೆ ಸೂಚಿಸಿದ್ದರ ಮೇರೆಗೆ ನಾನು ಮತ್ತು ನನ್ನ ಮೊಮ್ಮಗ ತಕ್ಷಣ ಠಾಣೆಗೆ ಹೋದೆವು. ಠಾಣೆಯ ಒಳಗೆ ಹೋಗಿ ನಮಸ್ತೆ ಮೇಡಂ ಎಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀಮತಿ ಸವಿನಯ ರವರಿಗೆ ಹೇಳಿದೆ, ಹೇಳಿದ 15 ನಿಮಿಷದ ಒಳಗೆ ಏಕಾಏಕಿ ನನಗೆ ಹೊಡೆದರು. ನಂತರ ನನ್ನ ಗಂಡನಿಗೆ ನನ್ನ ಮೊಮ್ಮಗ ನನ್ನ ಮಗಳಿಗೆ ಫೋನ್ ಮೂಲಕ ನನ್ನ ಗಂಡನಿಗೆ ವಿಷಯ ತಿಳಿಸಿದನು. ಆಗ ಆಟೋದಲ್ಲಿ ನನ್ನ ಗಂಡ ಠಾಣೆಯ ಹತ್ತಿರ ಬಂದರು ಆಗ ನಾವುಗಳು ಜಯನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಗೆ ಹೋದೆವು. ನನಗೆ ಹಲ್ಲೆ ನಡೆಸಿದ ಸಮಯ ಸುಮಾರು ಮದ್ಯಾಹ್ನ 1 ಗಂಟೆ ಆಗಿರಬಹುದು. ಆದರೆ ಸಮಯ ನನಗೆ ಅಷ್ಟು ನೆನಪಿಲ್ಲ."

ಶ್ರೀಮತಿ ಸಯಿದಾ ನಸ್ರೀನ್ ರವರನ್ನು ಪರಿಕ್ಷೀಸಿದ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ರವರಿಂದ ಶ್ರೀಮತಿ ಸಯಿದಾ ನಸ್ರೀನ್ ರವರ ಮೇಲೆ ನಡೆದ ಹಲ್ಲೆಯ ಸಮಯ ಹಾಗೂ ಅವರಿಗೆ ಆದ ಗಾಯದ ವಯಸ್ಸಿನ ಬಗ್ಗೆ ಸರಿಯಾಗಿ ತಿಳಿದು ವರದಿ ಸಲ್ಲಿಸುವಂತೆ ಆಯೋಗದ ಡಿವೈ.ಎಸ್.ಪಿ. ಆದ ಶ್ರೀ ಮಂಜುನಾಥ್ ರವರಿಗೆ ಆದೇಶಿಸಿದ್ದು, ಗಾಯಾಳುವಿನ ಗಾಯದ ಬಗ್ಗೆ ಡಾ. ಅಶ್ವಥ್‌ನಾರಾಯಣ್ ರವರಿಂದ ವಿವರಣೆ ಹಾಗೂ ಅಭಿಪ್ರಾಯ ಒಳಗೊಂಡ ಪತ್ರದೊಂದಿಗೆ ದಿನಾಂಕ 07–10–2021 ರ ಪತ್ರದನ್ವಯ ವರದಿಯನ್ನು ಆಯೋಗದ ಡಿವೈ.ಎಸ್.ಪಿ. ಶ್ರೀ ಮಂಜುನಾಥ್ ರವರು ಸಲ್ಲಿಸಿದ್ದಾರೆ. ಡಾ. ಅಶ್ವಥ್‌ನಾರಾಯಣ್ ರವರು ಶ್ರೀಮತಿ ಸಯಿದಾ ನಸ್ರೀನ್ ರವರ ಗಾಯದ ಬಗ್ಗೆ ನೀಡಿರುವ ವಿವರಣೆ ಹಾಗೂ ಅಭಿಪ್ರಾಯ ಕೆಳಕಂಡಂತಿದೆ:

"2. Medical Opinion regarding time of injury cannot be mentioned in terms of minutes as per your question in your letter  But it is given as approximately in hours of duration. Age & Injury depends on many factor like individual skin colour, Blood Hemoglobin level. If the person is taking any Blood – thinners. So in this case it cannot, be exactly said the Injury-occurred 30 minutes before examination.
3. In my opinion it could be approximately any time between 2 hrs to 18 hrs. from the time & examination. As the 3rd injury mentioned by me was a very small contusion measure 2x3 cm., the exact nature of its infliction cannot be concluded"

ದೂರರ್ಜಿ, ವರದಿ, ಅಭಿಪ್ರಾಯ, ಹೇಳಿಕೆಗಳು, ಆಯೋಗದ ಡಿವೈ.ಎಸ್.ಪಿ ರವರು ನೀಡಿದ ವರದಿಗಳು ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿ, ದಿನಾಂಕ.13.09.2020 ರಂದು ದೂರುದಾರರಾದ ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ತಿಲಕ್‌ನಗರ ಪೊಲೀಸ್ ಠಾಣೆಯಿಂದ ಠಾಣೆಗೆ ಬರುವಂತೆ ತಿಳಿಸಿದ್ದು, ದೂರುದಾರರು ಠಾಣೆಗೆ ಹೋದಾಗ, ದೂರುದಾರರ ಮನೆಯಲ್ಲಿ ಬಾಡಿಗೆಗೆ ಇದ್ದ ಶ್ರೀಮತಿ ಉಷಾ ರವರು ದೂರುದಾರರ ಮೇಲೆ ಅಸಂಜ್ಞೆ ಪ್ರಕರಣವನ್ನು ದಾಖಲಿಸಿದ್ದು, ಅಸಂಜ್ಞೆ ಪ್ರಕರಣದಲ್ಲಿ ವಿಚಾರಣೆ ಮಾಡಲು ಯಾವುದೇ ಅಧಿಕಾರವಿಲ್ಲದಿದ್ದರೂ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಸವಿನಯ ಬಿ.ಜೆ ರವರು ವಿಚಾರಣೆ ಮಾಡಿರುವುದು ಕಾನೂನು ಬಾಹಿರವಾಗಿರುತ್ತದೆ.

ದೂರುದಾರರಾದ ಶ್ರೀಮತಿ ಸಯಿದಾ ನಸ್ರೀನ್ ರವರು ತಮ್ಮ ದೂರರ್ಜಿ ಹಾಗೂ ಹೇಳಿಕೆಯಲ್ಲಿ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಸವಿನಯ ಬಿ.ಜೆ ರವರು ಅಸಂಜ್ಞೆ ಪ್ರಕರಣದಲ್ಲಿ ವಿಚಾರಣೆ ಮಾಡಿದ್ದಲ್ಲದೇ ದೂರುದಾರರನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿ, ಥಳಿಸಿರುತ್ತಾರೆಂದು ಹಾಗೂ ಇದರ ಬಗ್ಗೆ ಸಾರ್ವಜನಿಕ ಆಸ್ಪತ್ರೆ, ಜಯನಗರ ರಲ್ಲಿ ಎಂ.ಎಲ್.ಸಿ ಮಾಡಿಸಿರುತ್ತಾರೆಂದು ನುಡಿದಿರುತ್ತಾರೆ. ಗಾಯದ ಪ್ರಮಾಣ ಪತ್ರ ಹಾಗೂ ಗಾಯದ ಬಗ್ಗೆ ವೈದ್ಯಾಧಿಕಾರಿಗಳು ನೀಡಿದ ಅಭಿಪ್ರಾಯವನ್ನು ನೋಡಲಾಗಿ, ಗಾಯದ ಪ್ರಮಾಣ ಪತ್ರದಲ್ಲಿ "Assault on 13-09-2020 at 1:45 PM at Tilak

Nagar by Savinaya hands & legs". ವೈದ್ಯಾಧಿಕಾರಿಗಳು ನೀಡಿದ ಅಭಿಪ್ರಾಯದಲ್ಲಿ "…..ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ಆದ ಗಾಯಗಳು ಸುಮಾರು 2 ರಿಂದ 18 ಗಂಟೆಗಳ ಒಳಗೆ ಆಗಿರಬಹುದು". ಎಂದು ನಮೂದಿಸಲಾಗಿದೆ. ಆದರೆ ದಿನಾಂಕ.13.09.2020ರಂದು ಮದ್ಯಾಹ್ನ 2:15 ಗಂಟೆಗೆ ಸಾರ್ವಜನಿಕ ಆಸ್ಪತ್ರೆ, ಜಯನಗರ ರಲ್ಲಿ ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ಆಗಿದ್ದ ಗಾಯಗಳನ್ನು ಪರೀಕ್ಷಿಸಿರುತ್ತಾರೆಂದು ನಮೂದಿಸಲಾಗಿದೆ. ಪೊಲೀಸರು ಹೇಳುವ ಪ್ರಕಾರ ದೂರುದಾರರು ವೈದ್ಯಾಧಿಕಾರಿಗಳ ಬಳಿ ಪರೀಕ್ಷಿಸಿಕೊಳ್ಳುವ 2 ರಿಂದ 18 ಗಂಟೆಗಳ ಹಿಂದೆಯೇ ಗಾಯಗಳು ಆಗಿರುತ್ತದೆ ಅಂದರೇ  ದೂರುದಾರರು ಪೊಲೀಸ್ ಠಾಣೆಗೆ ಬರುವ ಮೊದಲೇ ಸದರಿ ಗಾಯಗಳಾಗಿರುತ್ತದೆಂದು ಹೇಳುತ್ತಾರೆ.

ಪಿ.ಎಸ್.ಐ. ಆದ ಶ್ರೀಮತಿ ಸವಿನಯ ರವರು ಶ್ರೀಮತಿ ಸೈಯಿದಾ ನಸ್ರೀನ್ ರವರ ಮೇಲೆ ಹಲ್ಲೆ ಮಾಡಿರುವ ಬಗ್ಗೆ ಶ್ರೀಮತಿ ಸೈಯಿದ ನಸ್ರೀನ್ ರವರು ನೀಡಿರುವ ಹೇಳಿಕೆಯಲ್ಲಿ ಮಾತ್ರವಲ್ಲದೇ ಆಯೋಗದ ವಿಚಾರಣಾ ವಿಭಾಗವು ನಡೆಸಿದ ವಿಚಾರಣೆಯಲ್ಲೂ ಕಂಡು ಬರುತ್ತದೆ. ಶ್ರೀಮತಿ ಸೈಯಿದಾ ನಸ್ರೀನ್ ರವರು ವೈದ್ಯರ ಮುಂದೆ, ದಿನಾಂಕ.13.09.2020 ರಂದು ಪಿ.ಎಸ್.ಐ. ಆದ ಶ್ರೀಮತಿ ಸವಿನಯ ರವರು ತಮ್ಮ ಕೈ ಹಾಗೂ ಕಾಲಿನಿಂದ ಹಲ್ಲೆ ಮಾಡಿರುತ್ತಾರೆಂದು ಸ್ಪಷ್ಟವಾಗಿ ಹೇಳಿರುತ್ತಾರೆ.  ಶ್ರೀಮತಿ ಸೈಯಿದಾ ನಸ್ರೀನ್ ರವರಿಗೆ ಉಂಟಾದ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಸದರಿ ಗಾಯವು 2 ರಿಂದ 18 ಗಂಟೆಗಳಷ್ಟು ಹಳೆಯದು ಎಂಬ ವಿಷಯವನ್ನು ತೆಗೆದುಕೊಳ್ಳುವುದರಿಂದ  ದೂರುದಾರರ ಮೇಲೆ ಶ್ರೀಮತಿ ಸವಿನಯ ರವರು ಹಲ್ಲೆ ಮಾಡಿದ ಸಂಗತಿಯನ್ನು ಪರಿಶೀಲಿಸಲಾಗಿ,  ಶ್ರೀಮತಿ ಸಯಿದಾ ನಸ್ರೀನ್ ರವರ ಹೇಳಿಕೆಯಲ್ಲಿ, ದಿನಾಂಕ 13–09–2020ರಂದು 12 ಗಂಟೆಗೆ  ಠಾಣೆಯಿಂದ ಕರೆ ಬಂದ ಕೂಡಲೇ, ಠಾಣೆಗೆ ಹೋಗಿದ್ದು, ಸುಮಾರು ಮಧ್ಯಾಹ್ನ 1 ಗಂಟೆಗೆ ಶ್ರೀಮತಿ ಸವಿನಯ ರವರಿಂದ ಥಳಿತಕ್ಕೆ ಒಳಗಾದೆನೆಂದು ನುಡಿದಿರುತ್ತಾರೆ. ಆದ್ದರಿಂದ ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ಹಲ್ಲೆಯಾಗಿರುವ ಸಮಯದ ಬಗ್ಗೆ ಸ್ಪಷ್ಟೀಕರಣ ಕೇಳಲು ದಿನಾಂಕ 17–11–2021 ರಂದು ಆಯೋಗದ ಮುಂದೆ ಹಾಜರಾಗಲು ತಿಳಿಸಿದ್ದು, ಅದರಂತೆ ಶ್ರೀಮತಿ ಸಯಿದಾ ನಸ್ರೀನ್ ರವರು ಹಾಜರಾಗಿದ್ದು, ಶ್ರೀಮತಿ ಸಯಿದಾ ನಸ್ರೀನ್ ರವರು ಠಾಣೆಯಲ್ಲಿ ಹಲ್ಲೆಗೊಳಗಾದ ನಂತರ 15 ನಿಮಿಷಗಳಲ್ಲಿ ಜಯನಗರದ ಸಾರ್ವಜನಿಕ ಆಸ್ಪತ್ರೆಗೆ ತಲುಪಿದನೆಂದು ಸ್ಪಷ್ಟೀಕರಣ ನೀಡಿರುತ್ತಾರೆ. ಆದ್ದರಿಂದ ಎಂ.ಎಲ್.ಸಿ ಯಲ್ಲಿ 1.45 P.M ಎಂದು ನಮೂದಾಗಿರುವ

ಸಮಯ ಸರಿಯಲ್ಲ. ಮುಂದುವರಿದು, ಡಾ॥ ಅಶ್ವಥ್ ನಾರಾಯಣ್ ರವರು ಗಾಯಾಳುವಿಗೆ ಆಗಿರುವ ಗಾಯದ ಬಗ್ಗೆ " time of injury cannot be mentioned in terms of minutes." "But it is given as approximately in hours of duration." ಮುಂದುವರೆದು, ಡಾ॥ ಅಶ್ವಥ್ ನಾರಾಯಣ್ ರವರು ಸ್ಪಷ್ಟೀಕರಿಸುವುದೇನೆಂದರೆ "So in this case it cannot, be exactly said the Injury-occurred 30 minutes before examination." ಇದರಿಂದ ತಿಳಿದು ಬರುವುದೇನೆಂದರೆ ಕ್ಯಾಷುಲ್ಯಾಟಿ ಮೆಡಿಕಲ್ ಆಫೀಸರ್ ರವರು ಗಾಯಾಳುವಿಗೆ ಆಗಿರುವ ಗಾಯದ ಸಮಯದ ಬಗ್ಗೆ ಸಮಯವು ಖಚಿತವಾಗಿಲ್ಲವೆಂದು ತಿಳಿಸಿರುವುದರಿಂದ, ಆಯೋಗವು ಶ್ರೀಮತಿ ಸಯಿದಾ ನಸ್ರೀನ್ ರವರು ನೀಡಿರುವ ಹೇಳಿಕೆಯನ್ನು ಪರಿಗಣಿಸುತ್ತದೆ.

ಮುಂದುವರೆದು, ಸದರಿ ಎಂ.ಎಲ್.ಸಿಯ ಬಗ್ಗೆ ತಿಲಕ್ ನಗರ ಪೊಲೀಸ್ ಠಾಣೆಯವರು ಏನು ಕ್ರಮ ಜರುಗಿಸಿರುತ್ತಾರೆಂದು ಆಯೋಗದ ಡಿವೈ. ಎಸ್.ಪಿ ರವರಿಗೆ ವರದಿ ನೀಡಲು ಕೇಳಲಾಗಿ, ವರದಿಯಲ್ಲಿ ಜಯನಗರದ ಸಾರ್ವಜನಿಕ ಆಸ್ಪತ್ರೆಯವರು ತಿಲಕ್ ನಗರ ಪೊಲೀಸ್ ಠಾಣೆಗೆ ಸದರಿ ಎಂ.ಎಲ್.ಸಿ ಯನ್ನು ಕಳುಹಿಸಿಕೊಟ್ಟಿರುವುದಿಲ್ಲವೆಂದು ಹಾಗೂ ತಿಲಕ್ ನಗರದ ಪೊಲೀಸ್ ಠಾಣೆಯ ಪೊಲೀಸರು ಸದರಿ ಎಂ.ಎಲ್.ಸಿಯನ್ನು ಸ್ವೀಕರಿಸಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

ತಿಲಕ ನಗರ ಪೊಲೀಸ್ ಠಾಣೆಯವರು ಠಾಣೆಯಲ್ಲಿ ಸಿಸಿ ಟಿವಿ ಕ್ಯಾಮರಾವನ್ನು ಅಳವಡಿಸಲಾಗಿದೆ ಎಂದು ತಿಳಿಸಿದ್ದು, ಸಿಸಿ ಟಿವಿ ಫೂಟೇಜ್ ಬಗ್ಗೆ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಆಯೋಗದ ಡಿವೈ. ಎಸ್.ಪಿ ರವರಿಗೆ ಸೂಚಿಸಿದ್ದು, ಅದರಂತೆ ಆಯೋಗದ ಡಿವೈ. ಎಸ್.ಪಿ ರವರು ಪೊಲೀಸ್ ಇನ್ಸ್‌ಪೆಕ್ಟರ್, ತಿಲಕನಗರ ಪೊಲೀಸ್ ಠಾಣೆಯವರಿಗೆ ಸೂಚಿಸಿದ್ದು, ತಿಲಕನಗರ ಪೊಲೀಸ್ ಠಾಣೆಯಲ್ಲಿ ಸಿಸಿ ಟಿವಿ ಕ್ಯಾಮರಾವನ್ನು ಪೊಲೀಸ್ ಇನ್ಸ್‌ಪೆಕ್ಟರ್ ರವರು ಸ್ವಂತ ಖರ್ಚಿನಲ್ಲಿ ಠಾಣೆಯ ಒಳಗಡೆ ಹಾಗೂ ಸ್ವಾಗತಕಾರರ ಜಾಗದ ಬಳಿ ನಡೆಯುವ ಸಿಬ್ಬಂದಿಗಳ ಕಾರ್ಯವೈಖರಿಯನ್ನು ನಿಯಂತ್ರಣ ಮಾಡಲು ಆಡಳಿತಾತ್ಮಕ ಹಿತ ದೃಷ್ಟಿಯಿಂದ ಹಾಕಿಸಿದ್ದು, ಇವು ವೀಕ್ಷಿಸಲು ಮಾತ್ರ ಸಾಧ್ಯವಿರುತ್ತದೆ. ಆದರೆ ಈ ಕ್ಯಾಮರಾದಲ್ಲಿರುವ ಮಾಹಿತಿಯನ್ನು ಸಂಗ್ರಹಿಸಲು ಠಾಣೆಯಲ್ಲಿ ಯಾವುದೇ ಡಿ.ವಿ.ಆರ್‌ನ್ನು ಅಳವಡಿಸಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

ಅಂದಿನ ತಿಲಕ ನಗರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರಾದ ಶ್ರೀಮತಿ ಸವಿನಯ ಬಿ.ಜೆ (ಹಾಲಿ ಪಿ.ಎಸ್.ಐ, ಬೇಗೂರು ಪೊಲೀಸ್ ಠಾಣೆ, ಬೆಂಗಳೂರು) ರವರು ಅಸಂಜ್ಞೆ ಪ್ರಕರಣದಲ್ಲಿ ವಿಚಾರಣೆ ಮಾಡಲು ಅಧಿಕಾರವಿಲ್ಲದಿದ್ದರೂ ದೂರುದಾರರಾದ ಶ್ರೀಮತಿ ಸಯಿದಾ ನಸ್ರೀನ್ ರವರನ್ನು ವಿಚಾರಣೆ ಮಾಡಿ ಹಲ್ಲೆ ನಡೆಸಿ ಕರ್ತವ್ಯ ನಿರ್ಲಕ್ಷ್ಯತನವನ್ನು ತೋರಿರುವುದು ವಿಚಾರಣಾ ಕಾಲದಲ್ಲಿ ಕಂಡುಬರುತ್ತದೆ. ಮೇಲ್ಕಂಡ ಕಾರಣಗಳಿಂದ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

1. ದೂರರ್ಜಿದಾರರಾದ ಶ್ರೀಮತಿ ಸಯಿದಾ ನಸ್ರೀನ್ ರವರಿಗೆ ರೂ. 5,000/- (ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಅಂದಿನ ತಿಲಕ ನಗರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರಾದ ಶ್ರೀಮತಿ ಸವಿನಯ ಬಿ.ಜೆ (ಹಾಲಿ ಪಿ.ಎಸ್.ಐ, ಬೇಗೂರು ಪೊಲೀಸ್ ಠಾಣೆ, ಬೆಂಗಳೂರು) ರವರ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಅಂದಿನ ತಿಲಕ ನಗರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆದ ಶ್ರೀಮತಿ ಸವಿನಯ ಬಿ.ಜೆ (ಹಾಲಿ ಪಿ.ಎಸ್.ಐ, ಬೇಗೂರು ಪೊಲೀಸ್ ಠಾಣೆ, ಬೆಂಗಳೂರು) ರವರ ವೇತನದಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.
2. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ.02.12.2020ರಂದು SLP(Cr) No.3543/2020 ಪ್ರಕರಣದಲ್ಲಿ ಸಿಸಿ ಟಿವಿ ಕ್ಯಾಮಾರ ಬಗ್ಗೆ ನೀಡಿರುವ ಆದೇಶದನ್ವಯ ನಿಯಮಗಳನ್ನು ಎಲ್ಲಾ ಪೊಲೀಸ್ ಠಾಣೆಗಳು ಪಾಲಿಸುವಂತೆ ನಿರ್ದೇಶಿಸಿದ್ದು, ಅದರಂತೆ ಕರ್ನಾಟಕ ಸರ್ಕಾರದ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 31–01–2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.